ಅ) ಇತ್ತೀಚಿಗೆ ಕಳಪೆ ಗರ್ಭಧಾರಣೆ ಚುಚ್ಚು ಮದ್ದನ್ನು ಕೊಡುತ್ತಿದ್ದು, ಕರುಗಳ ಹುಟ್ಟುವಿನ ಸಂಖ್ಯೆ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಗರ್ಭಧಾರಣಾ ಯೋಗ್ಯ ಆಕಳುಗಳ ಒಟ್ಟು ಸಂಖ್ಯೆಯಲ್ಲಿ ಕೇವಲ ಶೇ: 20 ಕೃತಕ ಗರ್ಭಧಾರಣೆ ಮಾಡಲಾಗುತ್ತಿದೆ

ಆ) ಇಲ್ಲ, ಉದ್ಭವಿಸುವುದಿಲ್ಲ.

ಗುಳೇದಗುಡ್ಡ ಮತ ಕ್ಷೇತ್ರದಲ್ಲಿ ಶ್ರೀ ಗಂಧದ ಮರಗಳ ಅಭಿವೃದ್ಧಿ

208 (445) ಶ್ರೀ ರಾಜಶೇಖರ.ವಿ. ಶೀಲವಂತ (ಗುಳೇದಗುಡ್ಡ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಗುಳೇದಗುಡ್ಡ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಹೆಚ್ಚು ಅರಣ್ಯ ಪ್ರದೇಶವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಆ) ಹಾಗಿದ್ದಲ್ಲಿ, ಇದರ ಅಭಿವೃದ್ಧಿಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಇ) ಅದರಲ್ಲಿ ಶ್ರೀ ಗಂಧದ ಮರಗಳನ್ನು ಅಭಿವೃದ್ಧಿಪಡಿಸುವ ಹಾಗೂ ರಕ್ಷಿಸುವ ಬಗ್ಗೆ ವಿಶೇಷವಾದ ಕಾರ್ಯಕ್ರಮಗಳೇನಾದರೂ ಹಮ್ಮಿಕೊಳ್ಳಲಾಗಿದೆಯೇ?

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಈ ಪ್ರದೇಶಗಳಲ್ಲಿ 1983-84 ನೇ ಸಾಲಿನಲ್ಲಿ 1997-98ನೇ ಸಾಲಿನವರೆಗೆ ಒಟ್ಟು 3968 ಹೆಕ್ಟೇರ್ ಪ್ರದೇಶಗಳಲ್ಲಿ ನೆಡುತೋಪುಗಳನ್ನು ಬೆಳೆಸಲಾಗಿದೆ.

ಇ) ಹೌದು

ಬಾಗಲಕೋಟೆಯಲ್ಲಿ ಜಿಲ್ಲಾ ಮಟ್ಟದ ಪ್ರವಾಸೋದ್ಯಮ ಕಛೇರಿ

209 (448) ಶ್ರೀ ರಾಜಶೇಖರ.ವಿ. ಶೀಲವಂತ (ಗುಳೇದಗುಡ್ಡ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಪ್ರವಾಸೋದ್ಯಮ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? (ಯಾವ ಶ್ರೇಣಿಯ ಎಷ್ಟೆಷ್ಟು ಹುದ್ದೆಗಳು ಖಾಲಿ ಇದೆ)

ಆ) ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಇ) ಅರ್ಹತೆ ಇರುವ ತರಬೇತಿ ಪಡೆದ ಪ್ರವಾಸಿ ಮಾರ್ಗದರ್ಶನಗಳ ಆಯ್ಕೆಗೆ ಅವಕಾಶ ನೀಡಲಾಗುವುದೆ?

ಈ) ಐತಿಹಾಸಿಕ ಪ್ರಸಿದ್ಧ ಬಾದಾಯಿ, ಐಹೊಳೆ ಪಟ್ಟದಕಲ್ಲು ಸ್ಥಳಗಳು ನೂತನವಾಗಿ ಅಸ್ತಿತ್ವಕ್ಕೆ ಬಂದ ಬಾಗಲಕೋಟೆ ಜಿಲ್ಲೆಯ ವ್ಯಾಪ್ತಿಯಲ್ಲಿರುವುದರಿಂದ ಬಾಗಲಕೋಟೆಗೆ ಪ್ರವಾಸಿ ಕಛೇರಿ ಮಂಜೂರು ಮಾಡಲಾಗುವುದೆ?

ಶ್ರೀಮತಿ ಲೀಲಾದೇವಿ .ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಪ್ರವಾಸೋದ್ಯಮ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಕೆಳಗಿನಂತಿದೆ:-

ಗ್ರೂಪ್ 'ಎ'	-	1
ಗ್ರೂಪ್ 'ಬಿ'	-	1
ಗ್ರೂಪ್ 'ಸಿ'	-	21
ಗ್ರೂಪ್ 'ಡಿ'	-	2
		25

ಆ) ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ

ಇ) ಪ್ರವಾಸಿ ಮಾರ್ಗದರ್ಶಿಗಳನ್ನು ನೇಮಕ ಮಾಡುವ ಸಂದರ್ಭದಲ್ಲಿ ಅರ್ಹತೆ ಹಾಗೂ ತರಭೇತಿ ಪಡೆದ ಮಾರ್ಗದರ್ಶಿಗಳ ನೇಮಕಾತಿಗೆ ಅವಕಾಶ ನೀಡಲಾಗುವುದು.

ಈ) ಬಾಗಲಕೋಟೆಯನ್ನು ಹೊಸ ಜಿಲ್ಲೆಯಾಗಿ ಸೃಷ್ಟಿಸುವುದಕ್ಕೆ, ಮೊದಲು ಬಾದಾಮಿ, ಪಟ್ಟದಕಲ್ಲು, ಐಹೊಳೆ ಈ ಪ್ರದೇಶಗಳು ಬಿಜಾಪುರ ಜಿಲ್ಲಾ ವ್ಯಾಪ್ತಿಯಲ್ಲಿದ್ದವು. ಬಿಜಾಪುರದಲ್ಲಿ ಪ್ರಾದೇಶಿಕ ಪ್ರವಾಸಿ ಕಛೇರಿಯನ್ನು ಸಹ ತೆರೆಯಲಾಗಿದೆ. ಬಾಗಲಕೋಟೆಯನ್ನು ಹೊಸ ಜಿಲ್ಲೆಯಾಗಿ ರಚಿಸಿರುವುದರಿಂದ ಬಾಗಲಕೋಟೆಯಲ್ಲಿ ಜಿಲ್ಲಾ ಮಟ್ಟದ ಕಛೇರಿ ತೆರೆಯಲಿ ಪರಿಶೀಲಿಸಲಾಗುವುದು.

ಲೋಕೋಪಯೋಗಿ ಇಲಾಖೆಯಲ್ಲಿ ಫಾರಂ -32 ರ ಅಡಿಯಲ್ಲಿ ತೆಗೆದುಕೊಳ್ಳಲಾದ ಕಾಮಗಾರಿಗಳು

210 (447) ಶ್ರೀ ರಾಜಶೇಖರ ಶೀಲವಂತ (ಗುಳೇದಗುಡ್ಡ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ಕೆಲಸಕ್ಕೆ ಫಾರಂ 32ರ ಅಡಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುತ್ತಿದೆಯೇ

ಆ) ಇದರಲ್ಲಿ ಯಾವ ತೆರನಾದ ಕೆಲಸಗಳನ್ನು ತೆಗೆದುಕೊಳ್ಳಲಾಗುತ್ತಿದೆ

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಇಲ್ಲ

ಆ) ಈ ನಮೂನೆಯನ್ನು ಕೈಗೊಂಡ ಕಾಮಗಾರಿಯ ಬಿಲ್ ಪಾವತಿಸಲು ಉಪಯೋಗಿಸಲಾಗುತ್ತಿದೆ.